# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 2423 |
| ಸದಸ್ಯರ ಹೆಸರು | ಶ್ರೀ ಹೆಚ್.ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 27.03.2026 |
| ಉತ್ತರಿಸುವ ಸಚಿವರು | ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ ಮೂರು ವರ್ಷಗಳಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಇಲ್ಲಿಯವರೆಗೂ ಪದವಿ ಮತ್ತು ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡುತ್ತಿರುವ ಎಷ್ಟು ವಿದ್ಯಾರ್ಥಿಗಳಿಗೆ ವೇತನವನ್ನು ನೀಡಲಾಗಿದೆ; (ವಿವರ ನೀಡುವುದು) | ಕಳೆದ 3 ವರ್ಷಗಳಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಇಲ್ಲಿಯವರೆಗೂ ಪದವಿ ಮತ್ತು ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಿರುವ ಜಿಲ್ಲಾವಾರು ವಿವರಗಳನ್ನು **ಅನುಬಂಧ-1 ರಲ್ಲಿ** ನೀಡಲಾಗಿದೆ. |
| ಆ) | ವಿದ್ಯಾರ್ಥಿ ವೇತನಕ್ಕಾಗಿ ರಾಜ್ಯದಲ್ಲಿ ಮತ್ತು ವಿಶೇಷವಾಗಿ ಬೆಂಗಳೂರು ನಗರ ಜಿಲ್ಲೆಯಲ್ಲಿ ಎಷ್ಟು ವಿದ್ಯಾರ್ಥಿಗಳಿಂದ ಅರ್ಜಿ ಸಂಗ್ರಹವಾಗಿದೆ; ಮತ್ತು ವಿದ್ಯಾರ್ಥಿ ವೇತನ ನೀಡಬೇಕಾದರೆ ಸರ್ಕಾರ ನಿಗದಿಪಡಿಸಿರುವ ಮಾನದಂಡವೇನು; (ವಿವರ ನೀಡುವುದು) | 2025-26ನೇ ಸಾಲಿಗೆ ವಿದ್ಯಾರ್ಥಿ ವೇತನಕ್ಕಾಗಿ ಸಂಗ್ರಹವಾಗಿರುವ ವಿದ್ಯಾರ್ಥಿಗಳ ಜಿಲ್ಲಾವಾರು ವಿವರಗಳನ್ನು **ಅನುಬಂಧ-2 ರಲ್ಲಿ** ನೀಡಲಾಗಿದೆ.<br><br>ಹಿಂದುಳಿದ ವರ್ಗಗಳ ಮೆಟ್ರಿಕ್-ನಂತರದ ವಿದ್ಯಾರ್ಥಿ ವೇತನ ಕಾರ್ಯಕ್ರಮಗಳಿಗೆ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಯು ಕೇಂದ್ರ ಪುರಸ್ಕೃತ ಮೆಟ್ರಿಕ್-ನಂತರದ ವಿದ್ಯಾರ್ಥಿ ವೇತನ ಅಥವಾ ಶುಲ್ಕ ಮರುಪಾವತಿ ಯಾವುದಾದರೂ ಒಂದು ಸೌಲಭ್ಯ ಮಾತ್ರ ಪಡೆಯಬಹುದಾಗಿರುತ್ತದೆ.<br><br>ಅರ್ಜಿ ಸಲ್ಲಿಸಲು ವಿದ್ಯಾರ್ಥಿಯ ಕುಟುಂಬದ ಆದಾಯ ಮಿತಿಯು ಈ ಕೆಳಕಂಡಂತಿರಬೇಕು.<br><br>ಪ್ರವರ್ಗ-1 ರ ವಿದ್ಯಾರ್ಥಿಗಳಿಗೆ ರೂ.2.50 ಲಕ್ಷ.<br>ಪ್ರವರ್ಗ-2ಎ, ಪ್ರವರ್ಗ-3ಎ, ಪ್ರವರ್ಗ-3ಬಿ-1.00ಲಕ್ಷ.<br><br>ಕೇಂದ್ರ ಪುರಸ್ಕೃತ ಮೆಟ್ರಿಕ್-ನಂತರದ ವಿದ್ಯಾರ್ಥಿ ವೇತನ ಕಾರ್ಯಕ್ರಮದಡಿ ವಿದ್ಯಾರ್ಥಿ ವೇತನ ಪಡೆಯಲು ವಿದ್ಯಾರ್ಥಿಯು ಈ ಕೆಳಕಂಡಂತೆ ಅಂಕಗಳನ್ನು ಪಡೆದು ಉತ್ತೀರ್ಣರಾಗಿರಬೇಕು.<br><br>ಪ್ರವರ್ಗ-1 ರ ವಿದ್ಯಾರ್ಥಿಗಳಿಗೆ ಶೇ.60.00.<br>ಪ್ರವರ್ಗ-2ಎ, ಪ್ರವರ್ಗ-3ಎ, ಪ್ರವರ್ಗ-3ಬಿ- ಶೇ.70.00. |

...2

| | | |
|---|---|---|
| | | ಶುಲ್ಕ ಮರುಪಾವತಿ ಕಾರ್ಯಕ್ರಮದಡಿ ಶುಲ್ಕ ಮರುಪಾವತಿ ಪಡೆಯಲು ವಿದ್ಯಾರ್ಥಿಯು ಈ ಕೆಳಕಂಡಂತೆ ಅಂಕಗಳನ್ನು ಪಡೆದು ಉತ್ತೀರ್ಣರಾಗಿರಬೇಕು.<br>ಪ್ರವರ್ಗ-1 ರ ವಿದ್ಯಾರ್ಥಿಗಳಿಗೆ ಶೇ.50.00.<br>ಪ್ರವರ್ಗ-2ಎ, ಪ್ರವರ್ಗ-3ಎ, ಪ್ರವರ್ಗ-3ಬಿ-ಶೇ.60.00. |
| ಇ) | 2023, 2024, 2025ನೇ ಸಾಲಿನಲ್ಲಿ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿ ಒಂದು ವರ್ಷವಾದರೂ ವಿದ್ಯಾರ್ಥಿ ವೇತನ ನೀಡದಿರುವುದರಿಂದ ವಿದ್ಯಾರ್ಥಿಗಳಿಗೆ ಮುಂದಿನ ವಿದ್ಯಾಭ್ಯಾಸಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರದ ಕ್ರಮವೇನು? (ವಿವರ ನೀಡುವುದು) | ಕಳೆದ 05 ವರ್ಷಗಳಲ್ಲಿ ಶುಲ್ಕ ಮರುಪಾವತಿ ಕಾರ್ಯಕ್ರಮದಡಿ ಬಾಕಿ ಇರುವ ವಿದ್ಯಾರ್ಥಿಗಳಿಗೆ ಆರ್ಥಿಕ ಇಲಾಖೆಯಿಂದ ಅನುಮೋದನೆ ಪಡೆದು ಶುಲ್ಕ ಮರುಪಾವತಿ ಮಾಡಲು ಕ್ರಮವಹಿಸಲಾಗಿದೆ. ಪ್ರಸ್ತುತ ಹಿಂದಿನ ಸಾಲುಗಳಲ್ಲಿ ಬಾಕಿ ಇದ್ದ 1,54,089 ಅರ್ಹ ವಿದ್ಯಾರ್ಥಿಗಳಿಗೆ ರೂ.174.15 ಕೋಟಿಗಳ ಶುಲ್ಕ ಮರುಪಾವತಿ ಮಾಡಲು ಕ್ರಮವಹಿಸಿದೆ.<br>ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ವೇತನ ಕಾರ್ಯಕ್ರಮಗಳನ್ನು ಇ-ಆಡಳಿತ ಇಲಾಖೆ ಅಭಿವೃದ್ಧಿಪಡಿಸಿ ನಿರ್ವಹಣೆ ಮಾಡುತ್ತಿರುವ ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶದಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು, ಈ ಕಾರ್ಯಕ್ರಮಗಳಡಿ ವಿದ್ಯಾರ್ಥಿಗಳ ಆಧಾರ್ ಸಂಖ್ಯೆಗೆ ಜೋಡಣೆಯಾಗಿರುವ ಬ್ಯಾಂಕ್ ಖಾತೆಗೆ ನೇರವಾಗಿ ಜಮೆಮಾಡಲಾಗುತ್ತಿದೆ. ಆದರೆ ವಿದ್ಯಾರ್ಥಿಗಳ ಶೈಕ್ಷಣಿಕ ದತ್ತಾಂಶದಲ್ಲಿರುವ ಹೆಸರಿಗೂ ಆಧಾರ್‌ನಲ್ಲಿರುವ ಹೆಸರಿಗೂ ವ್ಯತ್ಯಾಸವಿರುತ್ತದೆ.<br>ವಿದ್ಯಾರ್ಥಿಗಳು ತಮ್ಮ ಬ್ಯಾಂಕ್ ಖಾತೆಗೆ ಆಧಾರ್ ಸಂಖ್ಯೆಯನ್ನು ಲಿಂಕ್ ಮಾಡಿರುವುದಿಲ್ಲ, ವಿಶ್ವವಿದ್ಯಾಲಯಗಳಿಂದ ಶೈಕ್ಷಣಿಕ ದತ್ತಾಂಶ ಹಂಚಿಕೊಂಡಿರುವುದಿಲ್ಲ ಮತ್ತು ಮಾನ್ಯ ಕರ್ನಾಟಕ ಹೈಕೋರ್ಟ್ ಆದೇಶದಂತೆ 2023-24 ಮತ್ತು 2024-25ನೇ ಸಾಲುಗಳಿಗೆ ಆರ್ಥಿಕ ವರ್ಷ ಮುಕ್ತಾಯವಾದ ನಂತರವೂ ಅರ್ಜಿ ಸ್ವೀಕರಿಸಲಾಗಿರುತ್ತದೆ. ಈ ಎಲ್ಲಾ ಕಾರಣಗಳಿಂದ ಶುಲ್ಕ ಮರುಪಾವತಿ ಮಾಡಲು ಬಾಕಿ ಇರುತ್ತದೆ. ಸದರಿ ವಿದ್ಯಾರ್ಥಿಗಳು Update ಮಾಡಬೇಕಾದ ದಾಖಲಾತಿಗಳನ್ನು ಕೂಡಲೇ Update ಮಾಡುವಂತೆ ತಿಳಿಸಿದ್ದು, ದಾಖಲಾತಿಗಳನ್ನು Update ಮಾಡಿರುವ ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿ ಮೊತ್ತ ಪಾವತಿಸಲಾಗಿರುತ್ತದೆ. |

**ಸಂಖ್ಯೆ:ಹಿಂವಕ 303 ಬಿಂಎಂಎಸ್ 2026**

**(ಶಿವರಾಜ. ಎಸ್. ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು.

ಮಾನ್ಯ ವಿಧಾನಪರಿಷತ್ತಿನ ಸದಸ್ಯರಾದ ಶ್ರೀ ಹೆಚ್ ಎಸ್ ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2423 ಕ್ಕೆ ಅನುಬಂಧ-1

| ಕ್ರ.ಸಂ | ಜಿಲ್ಲೆಯ ಹೆಸರು | 2022-23 | 2023-24 | 2024-25 |
|---|---|---|---|---|
| | | ವಿದ್ಯಾರ್ಥಿವೇತನ/ಶುಲ್ಕ ಮರುಪಾವತಿ ನೀಡಲಾಗಿರುವ ಪದವಿ ,ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ಸಂಖ್ಯೆ | ವಿದ್ಯಾರ್ಥಿವೇತನ/ಶುಲ್ಕ ಮರುಪಾವತಿ ನೀಡಲಾಗಿರುವ ಪದವಿ ,ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ಸಂಖ್ಯೆ | ವಿದ್ಯಾರ್ಥಿವೇತನ/ಶುಲ್ಕ ಮರುಪಾವತಿ ನೀಡಲಾಗಿರುವ ಪದವಿ ,ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ಸಂಖ್ಯೆ |
| 1 | ಬಾಗಲಕೋಟೆ | 21450 | 19650 | 17657 |
| 2 | ಬಳ್ಳಾರಿ | 9043 | 6760 | 7697 |
| 3 | ಬೆಳಗಾವಿ | 44805 | 42406 | 36690 |
| 4 | ಬೆಂಗಳೂರು ಗ್ರಾಮಾಂತರ | 5616 | 5202 | 5065 |
| 5 | ಬೆಂಗಳೂರು ನಗರ | 88224 | 77121 | 69653 |
| 6 | ಬೀದರ್ | 8944 | 7277 | 7355 |
| 7 | ಚಾಮರಾಜನಗರ | 4387 | 4080 | 3704 |
| 8 | ಚಿಕ್ಕಬಳ್ಳಾಪುರ | 7708 | 6301 | 5680 |
| 9 | ಚಿಕ್ಕಮಗಳೂರು | 6409 | 4883 | 3918 |
| 10 | ಚಿತ್ರದುರ್ಗ | 8175 | 6655 | 5492 |
| 11 | ದಕ್ಷಿಣ ಕನ್ನಡ | 15395 | 12897 | 14134 |
| 12 | ದಾವಣಗೆರೆ | 16363 | 14594 | 13135 |
| 13 | ಧಾರವಾಡ | 24170 | 20814 | 20518 |
| 14 | ಗದಗ | 10641 | 9519 | 8424 |
| 15 | ಹಾಸನ | 19992 | 15668 | 14057 |
| 16 | ಹಾವೇರಿ | 11028 | 9724 | 7823 |
| 17 | ಕಲಬುರಗಿ | 20681 | 17094 | 15980 |
| 18 | ಕೊಡಗು | 2695 | 2241 | 2001 |
| 19 | ಕೋಲಾರ | 6898 | 5558 | 5344 |
| 20 | ಕೊಪ್ಪಳ | 9801 | 8732 | 7786 |
| 21 | ಮಂಡ್ಯ | 19629 | 16095 | 13155 |
| 22 | ಮೈಸೂರು | 46010 | 37289 | 30692 |
| 23 | ರಾಯಚೂರು | 12607 | 9583 | 9458 |
| 24 | ರಾಮನಗರ | 7621 | 6948 | 5562 |
| 25 | ಶಿವಮೊಗ್ಗ | 20711 | 17055 | 14654 |
| 26 | ತುಮಕೂರು | 24461 | 18876 | 17930 |
| 27 | ಉಡುಪಿ | 10098 | 8381 | 6952 |
| 28 | ಉತ್ತರ ಕನ್ನಡ | 9924 | 8737 | 6491 |
| 29 | ವಿಜಯನಗರ | 7908 | 6684 | 5366 |
| 30 | ವಿಜಯಪುರ | 18108 | 16765 | 15313 |
| 31 | ಯಾದಗಿರಿ | 6396 | 5208 | 5475 |
| | ಒಟ್ಟು | 525898 | 448797 | 403156 |

ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು

**ಮಾನ್ಯ ವಿಧಾನಪರಿಷತ್ತಿನ ಸದಸ್ಯರಾದ ಶ್ರೀ ಹೆಚ್ ಎಸ್ ಗೋಪಿನಾಥ್ ( ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2423 ಕ್ಕೆ ಅನುಬಂಧ-2**

| ಕ್ರ.ಸಂ | ಜಿಲ್ಲೆಯ ಹೆಸರು | ಸ್ವೀಕೃತವಾದ ಅರ್ಜಿಗಳ ಸಂಖ್ಯೆ |
|---|---|---|
| 1 | ಬಾಗಲಕೋಟೆ | 33141 |
| 2 | ಬಳ್ಳಾರಿ | 12671 |
| 3 | ಬೆಳಗಾವಿ | 64574 |
| 4 | ಬೆಂಗಳೂರು ಗ್ರಾಮಾಂತರ | 8039 |
| 5 | ಬೆಂಗಳೂರು ನಗರ | 95848 |
| 6 | ಬೀದರ್ | 12000 |
| 7 | ಚಾಮರಾಜನಗರ | 5672 |
| 8 | ಚಿಕ್ಕ ಬಳ್ಳಾಪುರ | 8121 |
| 9 | ಚಿಕ್ಕಮಗಳೂರು | 5776 |
| 10 | ಚಿತ್ರದುರ್ಗ | 10018 |
| 11 | ದಕ್ಷಿಣ ಕನ್ನಡ | 20439 |
| 12 | ದಾವಣಗೆರೆ | 21839 |
| 13 | ಧಾರವಾಡ | 31627 |
| 14 | ಗದಗ | 14837 |
| 15 | ಹಾಸನ | 20202 |
| 16 | ಹಾವೇರಿ | 13914 |
| 17 | ಕಲಬುರ್ಗಿ | 24565 |
| 18 | ಕೊಡಗು | 2582 |
| 19 | ಕೋಲಾರ | 7214 |
| 20 | ಕೊಪ್ಪಳ | 14213 |
| 21 | ಮಂಡ್ಯ | 19759 |
| 22 | ಮೈಸೂರು | 48584 |
| 23 | ರಾಯಚೂರು | 15016 |
| 24 | ರಾಮನಗರ | 9545 |
| 25 | ಶಿವಮೊಗ್ಗ | 21361 |
| 26 | ತುಮಕೂರು | 25804 |
| 27 | ಉಡುಪಿ | 11934 |
| 28 | ಉತ್ತರ ಕನ್ನಡ | 12009 |
| 29 | ವಿಜಯನಗರ | 9727 |
| 30 | ವಿಜಯಪುರ | 25562 |
| 31 | ಯಾದಗಿರಿ | 8490 |
| **ಒಟ್ಟು** | | **635083** |

ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು